ಬೆಂಗಳೂರು ನಗರ ಹೊರವರ್ತುಲ ರಸ್ತೆಯ ಒಳಗಿನ ವ್ಯಾಪ್ತಿಯಲ್ಲಿ ಇರುವ ಘಟಕಗಳು ಶೇಕಡಾ 0.05 ಸಲ್ಫರ್ ಒಳಗೊಂಡ ಹೈಸ್ಪೀಡ್ ಡೀಸಲ್ ಅನ್ನು ಡಿ.ಜಿ.ಸೆಟ್ ಮತ್ತು ದ್ರವ ಇಂಧನ ಬಳಸುವ ಬಾಯ್ಲರ್‌ಗಳಲ್ಲಿ ಕಡ್ಡಾಯವಾಗಿ ಉಪಯೋಗಿಸುವಂತೆ ಸರ್ಕಾರವು ಆದೇಶ ಹೊರಡಿಸಿದೆ.

ಪರಿಣಾಮಕಾರಿಯಾಗಿ ವಾಯು ಮಾಲಿನ್ಯವನ್ನು ನಿಯಂತ್ರಿಸಲು ಒಂದು ಕಾರ್ಯಪಡೆಯನ್ನು ಸರ್ಕಾರವು ರಚಿಸಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದ ಮೇರೆಗೆ ಸರ್ಕಾರವು ಬೆಂಗಳೂರು ನಗರ ವಾಯು ಮಾಲಿನ್ಯವನ್ನು ನಿಯಂತ್ರಿಸಲು 14 ಅಂಶಗಳ ಒಂದು ಕ್ರಿಯಾ ಯೋಜನೆಯನ್ನು ತಯಾರಿಸಿ ಜಾರಿಗೊಳಿಸಲಾಗುತ್ತಿದೆ. ಈ ಕ್ರಿಯಾ ಯೋಜನೆಯ ಪ್ರಗತಿಯನ್ನು ಆಗಿಂದಾಗ್ಗೆ ಪರಿಶೀಲಿಸಲಾಗುತ್ತಿದೆ.

144(60) ಶ್ರೀ ಧ್ರುವನಾರಾಯಣ ಆರ್(ಸಂತೇಮರಳ್ಳಿ): ಮಾನ್ಯ ಕಂದಾಯ ಸಚಿವರು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಭದ್ರತಾ ಯೋಜನೆಯಡಿಯಲ್ಲಿ ಬಿ.ಪಿ.ಎಲ್. ಪಟ್ಟಿಯ ವಿಧವೆಯರಿಗೆ ವಿಧವಾ ವೇತನವು ಸರ್ಕಾರದಿಂದ 2002 ರಿಂದ (ಈವರೆಗೆ) ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಸರ್ಕಾರ ಈ ಬಗ್ಗೆ ತೆಗೆದುಕೊಂಡಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಬಂದಿರುವುದಿಲ್ಲ.

ಆ) ಉದ್ಭವಿಸುವುದಿಲ್ಲ.

145(218) ಶ್ರೀ ಗೋಪಾಲ ಪೂಜಾರಿ .ಕೆ (ಬೈಂದೂರು ಕ್ಷೇತ್ರ): ಮಾನ್ಯ ಜಗದೀಶ ಶೆಟ್ಟರ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕುಂದಾಪುರ ತಾಲ್ಲೂಕು ಭೂ ನ್ಯಾಯ ಮಂಡಳಿ ಹಾಗೂ ಅಕ್ರಮ ಸಕ್ರಮ ಸಮಿತಿ ಸದಸ್ಯರಿಗೆ ಸಿಟ್ಟಿಂಗ್ ಫೀಸ್ ಮತ್ತು ಪ್ರಮಾಣ ಭತ್ಯೆ ಬಿಡುಗಡೆ ಆಗಿದೆಯೇ;

ಆ) ಆಗಿದ್ದಲ್ಲಿ ವಿಳಂಬಕ್ಕೆ ಕಾರಣಗಳೇನು?

ಶ್ರೀ ಜಗದೀಶ ಶೆಟ್ಟರ್ (ಕಂದಾಯ ಸಚಿವರು):

ಅ) 1) ಕುಂದಾಪುರ ತಾಲ್ಲೂಕು ಭೂ ನ್ಯಾಯ ಮಂಡಳಿ ಸದಸ್ಯರಿಗೆ 2001-02 ರಿಂದ 2005-06ನೇ ಸಾಲಿನವರೆಗೆ ಒಟ್ಟು ರೂ.90,946-00 ಗಳನ್ನು ಪಾವತಿಸಬೇಕಾಗಿದ್ದು, ಇದರಲ್ಲಿ 2003-04ನೇ ಸಾಲಿನಲ್ಲಿ ರೂ.12,500-00 ಪಾವತಿಸಲಾಗಿದೆ. ಇನ್ನು ಬಾಕಿ ರೂ.74,446-00ಗಳನ್ನು ಪಾವತಿಸಬೇಕಾಗಿದ್ದು, ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಅಕ್ರಮ-ಸಕ್ರಮ ಸಮಿತಿ.

2) (ಎ) ಉಡುಪಿ ಜಿಲ್ಲೆಯ 3 ತಾಲ್ಲೂಕುಗಳ ಅಕ್ರಮ-ಸಕ್ರಮ ಸಮಿತಿ ಸದಸ್ಯರಿಗೆ ಸಿಟ್ಟಿಂಗ್ ಫೀಸ್ ಮತ್ತು ಪ್ರಮಾಣ ಭತ್ಯೆ ಪಾವತಿಗಾಗಿ ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 07 ಎಲ್‌ಜಿಪಿ01, ದಿನಾಂಕ:15-07-2002ರಲ್ಲಿ ರೂ.31,248-00 ಬಿಡುಗಡೆಯಾಗಿದ್ದು, ಆ ಪೈಕಿ ಕುಂದಾಪುರ ತಾಲ್ಲೂಕಿಗೆ ರೂ.10,000-00 ಅನುದಾನವನ್ನು ಹಂಚಿಕೆ ಮಾಡಲಾಗಿದೆ. ಈ ಮೊತ್ತದಲ್ಲಿ ರೂ.4,468-00ನ್ನು ಅಕ್ರಮ-ಸಕ್ರಮ ಸಮಿತಿ ಸದಸ್ಯರಿಗೆ ಪಾವತಿಸಲಾಗಿದೆ.

(ಬಿ) ಸರ್ಕಾರದ ಆದೇಶ ಸಂಖ್ಯೆ ಆರ್‌ಡಿ 05 ಎಲ್‌ಜಿಪಿ 2001, ದಿನಾಂಕ: 8-8-2003 ರಂದು ಉಡುಪಿ ಜಿಲ್ಲೆಗೆ ರೂ.10,350-00 ಅನುದಾನ ಬಿಡುಗಡೆ ಗೊಳಿಸಿದ್ದು, ಕುಂದಾಪುರ ತಾಲ್ಲೂಕಿಗೆ ರೂ.3,000-00 ಹಂಚಿಕೆ ಮಾಡಲಾಗಿದೆ.

(ಸಿ) ಅಕ್ರಮ-ಸಕ್ರಮ ಸಮಿತಿ ಸದಸ್ಯರು ಕ್ಲೈಮ್ ನೀಡದ ಕಾರಣದಿಂದ ಹಣ ಪಾವತಿಸಿರುವುದಿಲ್ಲವಾಗಿ ತಹಶೀಲ್ದಾರರು, ಕುಂದಾಪುರ ಇವರು ವರದಿ ನೀಡಿರುತ್ತಾರೆ.

146(219) ಶ್ರೀ ಗೋಪಾಲ ಪೂಜಾರಿ .ಕೆ(ಬೈಂದೂರು): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ರಾಷ್ಟ್ರೀಯ ಕುಟುಂಬ ಸಹಾಯ ಧನ ಯೋಜನೆಯಡಿಯಲ್ಲಿ ಮಂಜೂರಾತಿಗೆ ಅರ್ಹವಾಗಿದ್ದು ಅನುದಾನ ಕೊರತೆಯಿಂದ ಬಾಕಿ ಇರುವ ಪ್ರಕರಣಗಳಾವುವು (ತಾಲ್ಲೂಕುವಾರು ವಿವರ ನೀಡುವುದು)

ಆ) ಹಾಗಿದ್ದಲ್ಲಿ, ಅಗತ್ಯವಿರುವ ಅನುದಾನವನ್ನು ಬಿಡುಗಡೆಗೊಳಿಸಲು ಸರ್ಕಾರ ಕೈಗೊಳ್ಳುಲಿರುವ ಕ್ರಮವೇನು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು):

ಅ) ಕುಂದಾಪುರ ತಾಲ್ಲೂಕು	–	1503
ಉಡುಪಿ ತಾಲ್ಲೂಕು	–	1409
ಕಾರ್ಕಳ ತಾಲ್ಲೂಕು	–	690
ಜಿಲ್ಲೆಯ ಒಟ್ಟು	–	**3602**

ಆ) ಕೇಂದ್ರ ಸರ್ಕಾರವು ಈ ಯೋಜನೆಗೆ ರೂ.100 ಲಕ್ಷಗಳ ಅನುದಾನ ಬಿಡುಗಡೆ ಮಾಡಿದೆ. ಇದರಲ್ಲಿ ಉಡುಪಿ ಜಿಲ್ಲೆಗೆ ರೂ.5.50 ಲಕ್ಷಗಳನ್ನು ಬಿಡುಗಡೆ ಮಾಡಲಾಗುತ್ತಿದೆ. ಮಾರ್ಚ್ 2006ರ ಅಂತ್ಯದಲ್ಲಿ ಈ ಅನುದಾನವನ್ನು ಜಿಲ್ಲಾಧಿಕಾರಿಗೆ ತಲುಪುವಂತೆ ಕ್ರಮ ತೆಗೆದುಕೊಳ್ಳಲಾಗುವುದು.

147(469) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು): ಮಾನ್ಯ ಸಣ್ಣ ಕೈಗಾರಿಕಾ ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರೇಷ್ಮೆ ಇಲಾಖೆಯಲ್ಲಿ ಸಂಖ್ಯಾತಿರಿಕ್ತ ನೌಕರರನ್ನು ಇತರೆ ಖಾಲಿ ಇರುವ ಇಲಾಖೆಗಳಲ್ಲಿ ಮರು ನಿಯೋಜನೆಗೊಳಿಸಲು ಇರುವ ಅಡೆತಡೆಗಳೇನು: